ವ್ಯವಸ್ಥಾಪಕ ನಿರ್ದೇಶಕರ ಕಛೇರಿ
ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

ಕರ್ನಾಟಕ ಸರ್ಕಾರ

ಕಾವೇರಿ ಭವನ, 9ನೇ ಮಹಡಿ,ಇ ಮತ್ತು ಎಫ್ ಬ್ಲಾಕ್,
ಕೆ.ಜಿ.ರಸ್ತೆ, ಬೆಂಗಳೂರು–560 009
ದೂರವಾಣಿ : 080 2311 8888 ಫ್ಯಾಕ್ಸ್: 080 2234 7317
ಇ–ಮೇಲ್ : rgrhcl@rediffmail.com

# ಅಧಿಸೂಚನೆ

ದಿನಾಂಕ:17.02.2018

ವಿಷಯ 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ ಅರ್ಜಿಗಳ ಸಂಬಂಧ ಆಕ್ಷೇಪಣೆಗಳನ್ನು ಸಲ್ಲಿಸುವ ಬಗ್ಗೆ

ಉಲ್ಲೇಖ ಸರ್ಕಾರದ ಆದೇಶ ಸಂಖ್ಯೆ :ವಇ 57 ಹೆಚ್ಎಹೆಚ್ 2017 ದಿನಾಂಕ:23.10.2017

*****

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆರ್ಥಿಕವಾಗಿ ದುರ್ಬಲ ವರ್ಗದವರಿಗೆ 1 ಲಕ್ಷ ಬೆಂಗಳೂರು ಬಹುಮಹಡಿ ವಸತಿ ಯೋಜನೆಗೆ ಉಲ್ಲೇಖದ ಸರ್ಕಾರದ ಆದೇಶದಂತೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಆನ್‌ಲೈನ್ ಮೂಲಕ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಅದರನ್ವಯ ನಿಗದಿತ ಗಡುವಿನ ದಿನಾಂಕದೊಳಗೆ ಒಟ್ಟು 49125 ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ಹೀಗೆ ಸಲ್ಲಿಸಿರುವ ಎಲ್ಲಾ ಅರ್ಜಿದಾರರ ಹೆಸರು ಮತ್ತು ವಿವರಗಳನ್ನು ನಿಗಮದ ವೆಬ್‌ಸೈಟ್ www.ashraya.kar.nic.in/cmonelakhರಲ್ಲಿ ನೀಡಲಾಗಿರುತ್ತದೆ.

ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಅರ್ಜಿದಾರರ ಅರ್ಹತೆಯ ಬಗ್ಗೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಪೂರಕ ದಾಖಲೆಗಳೊಂದಿಗೆ ಸಾರ್ವಜನಿಕರು ದಿನಾಂಕ:24.02.2018ರ ಅಪರಾಹ್ನ 5 ಗಂಟೆಯೊಳಗೆ ಈ ಕೆಳಕಾಣಿಸಿದವರಿಗೆ ಇ–ಮೇಲ್ ಮೂಲಕ ಅಥವಾ ಲಿಖಿತವಾಗಿ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ. ನಿಗದಿಪಡಿಸಿದ ಗಡುವಿನ ದಿನಾಂಕದ ನಂತರ ಸಲ್ಲಿಸುವ ಯಾವುದೇ ದೂರು/ಆಕ್ಷೇಪಣೆಗಳನ್ನು ಸ್ವೀಕರಿಸುವುದಿಲ್ಲ.

ವಿಳಾಸ:

ವ್ಯವಸ್ಥಾಪಕ ನಿರ್ದೇಶಕರು,

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ,

ಕಾವೇರಿ ಭವನ, ಕೆ.ಜಿ.ರಸ್ತೆ,

ಬೆಂಗಳೂರು–09

ಇ–ಮೇಲ್ ವಿಳಾಸ: cmonelakhbengaluru@gmail.com

ವ್ಯವಸ್ಥಾಪಕ ನಿರ್ದೇಶಕರು
ರಾಜೀವ್‌ಗಾಂಧಿಗ್ರಾಮೀಣ ವಸತಿ ನಿಗಮ ನಿಯಮಿತ